ಹೆರೆಯದು ಎಲ್ಲಾ ಆಯ್ತುರ. ಯಾವದೂ ಕೈ ಹಿಡೀಲಿಲ್ಲ. ನಿಮ್ಮತ್ರ ಯಂತಾ ಮುಚ್ಚಿಡೂದು?... ಆವತ್ತು ರಾತ್ರಿ ನಿಮ್ಮನೇಲಿ ಊಟ ಮಾಡದನಲ್ರ ಅದೇ ಅವತ್ತಿಡೀ ನಾನು ಮಾಡಿದ ಊಟ...' ಅವನ ಕಣ್ಣಲ್ಲಿ ನೀರು ತುಂಬಿಕೊಂಡದ್ದು ಕಾಣಿಸಿತು. ಕರುಳಲ್ಲಿ ಏನೋ ಮಿಳಿಯುತ್ತಿರುವುದಕ್ಕೆ, ಈಗ ಊಟ ಮಾಡತ್ಯೇನೋ? ಅಂತ ಕೇಳಹೊರಟವರು, 'ಆಯ್ತೋ... ಸೋಗೆ ಅಲ್ವನಾ? ತಗಂಡುಹೋಗು... ನೀನೆ ಹೆಕ್ಕಿಕೊ' ಅಂದರು.

'ಒಂದೊಂದುಪದ್ರ ವಿನಾಕಾರಣ ಮೈಮೇಲೆ ಹಾಕ್ಕಳದನ್ನ ನಿಮ್ಮಿಂದ ಕಲೀಬೇಕು!...' ಹೆಂಡತಿಯ ಆಕ್ಷೇಪಕ್ಕೆ ಏನೂ ಹೇಳದೆ ಅಂಗಳಕ್ಕಿಳಿದರು. ಅರ್ಧತಾಸಾಗಿತ್ತು, ದೊಡ್ಡ ಸೋಗೆಹೊರೆ ಹೊತ್ತು ಬಂದ ಅಕ್ರಾಂ. ಅವನ ಹಿಂದೆ ಮತ್ತೊಂದು ಹೊರೆಯೊಂದಿಗೆ ಬರುವ ಸಾವಕ್ಕನನ್ನು ನೋಡಿ ಅಂಗಳದಲ್ಲಿದ್ದವರು ಅವಾಕ್ಕಾದರು. 'ಈ ಸಾವಕ್ಕಗೇನು ಸಾವು ಬಂತು? ಈ ಕೆಲಸಾನು ಸುರುಮಾಡಿಕೊಂಡ್ಳ?' ಹೆಂಡತಿಯ ವಿಸ್ಮಯ ಅವರದೂ ಆಗಿತ್ತು.

> ಗಂಡಸರು ಹೆಂಗಸರು ಅವರವರದೆ ಕಾರಣಕ್ಕೆ ಆತಂಕಕ್ಕೊಳಗಾಗುತ್ತ ಶಾಲಾಸಮಿತಿ ಮೀಟಿಂಗಿನಲ್ಲಿ ಸಾವಕ್ಕನನ್ನು ತೆಗೆದುಹಾಕುವುದಾಗಿ ಹೆದರಿಸಲೇಬೇಕಾಯಿತು. ಆದರೆ ಅವಳ, ತನಗೆ ಬೇರೇನಾದರೂ ಆದಾಯಕ್ಕೆ ದಾರಿಮಾಡಿಕೊಡಿ ಎಂಬ ಆರ್ತ ಬೇಡಿಕೆಗೆ ಅಸಹಾಯಕರಾದರು.

ಹತ್ತಾರು ವರ್ಷ ಹಿಂದೆ ಅಡಕೆಕೊಯ್ಲಿನಸಮಯಕ್ಕೆ ಎಲ್ಲಿಂದಲೊ ಬಂದಳು. ಸುತ್ತಲ ಹಳ್ಳಿಗಳಲ್ಲಿ ಅಡಕೆ ಸುಲಿಯುತ್ತ ಅವರು ಕೊಡುವ ಅವಲಕ್ಕಿ ಚಹ ತಿಂದುಕೊಂಡು ಅಟ್ಟದಡಿಗೆ ಅಡಕೆಯೊಲೆ ಪಕ್ಕ ಮಲಗುತ್ತ, ಒಲೆ ಬೆಂಕಿ ನೋಡಿಕೊಳ್ಳುತ್ತ, ಬೆಳಗ್ಗೆ ಸಿಪ್ಪೆ ಮೊಗೆದು ಹಾಕುತ್ತ ಇರುವವಳು ಕೆಲಸಕ್ಕೆ ಯಾರಿಗೂ ಬೇಡವಾಗಿರಲಿಲ್ಲ. ಅವಳ ಹೆಸರು ಸಾವಿತ್ರಿ ಅಂತ ಅವಳೇ ಹೇಳಿದ್ದಳು. ಅದು ಕೆಲವರಿಗೆ ಸಾವಿ ಅಂತಲೂ ಸಾವಕ್ಕ ಅಂತಲೂ ಆಗಿತ್ತು. ಅಕ್ಕಿ ಹಸಮಾಡುವುದು, ಬಾಳೇಕಾಯಿ ಹಲಸಿನಕಾಯಿ ಬಿಡಿಸಿ ಕೊಡುವುದು, ಮಾವಿನಮಿಡಿ ವಾಟೆಕಾಯಿ ತರೋದು ಹೀಗೆ ಕೆಲಸವಿದ್ದಾಗ ಸರಿ. ಆದರೆ ಬಾಕಿದಿನಗಳಲ್ಲಿ ಅದೂ ಅಡಕೆಕೊಯ್ಲಾದಮೇಲೆ ಕೆಲಸವಿಲ್ಲದೆ ಮಲಗಲು ನೆಲೆಯಿಲ್ಲದೆ ಅವಳ ಪಾಡು ದಾರುಣವಾಗುತ್ತಿತ್ತು. ಚಂದವಾಗಿ ಭಕ್ತಿ ಹಾಡು, ಮದುವೆ ಹಾಡು ಬರುತ್ತಿತ್ತು. ಅಡುಗೆ ಕೆಲಸ ಗೊತ್ತಿತ್ತು. ಆದರೆ ಯಾರೂ ಅವಳನ್ನು ಒಳಗೆ ಬಿಟ್ಟುಕೊಳ್ಳಲಿಲ್ಲ. ಪಾತ್ರೆ ತಿಕ್ಕುವುದು ಮುಂತಾದ ಹೊರಗಿನ ಕೆಲಸ ಮಾಡುತ್ತಿದ್ದಳು. ಸಾವಕ್ಕ ತೀರಾ ಸಣ್ಣಪ್ರಾಯದವಳೇನಲ್ಲ; ಮೂವತ್ತೈದು ನಲವತ್ತಿರಬಹುದು. ಆದರೆ ದೈಹಿಕಶ್ರಮ, ಮೇಲಿಂದ ಸಿಗುವ ಊಟತಿಂಡಿಯಲ್ಲಿನ ಮಿತಿ ದೇಹದ ಅಂಕುಡೊಂಕುಗಳಲ್ಲಿ ಬೊಜ್ಜು ಸೇರಲು ಬಿಟ್ಟಿರಲಿಲ್ಲ. ದೇವರು ಕೊಟ್ಟ ಲಕ್ಷಣವಾದ ಮುಖವಿತ್ತು. ಇದೆಲ್ಲದರ ಪರಿಣಾಮವಾಗಿ ಮನೆಯ ಗಂಡಸರಮೇಲೆ ಅಕಾರಣವೊ ಸಕಾರಣವೊ ಸಂದೇಹಕ್ಕೀಡಾಗುವ ಯಜಮಾನತಿಯರ ಮುನ್ನೆಚ್ಚರಿಕೆ ಸಾವಕ್ಕನನ್ನು ಒಂದುಕಡೆ ನಿಲ್ಲಗೊಡುತ್ತಿರಲಿಲ್ಲ. 'ನಾವಿಷ್ಟು ಕಾಳಜಿ ಮಾಡಿಕೊಂಡ್ರು ವಾತ ಪಿತ್ತ ಒಂದಲ್ಲ ಒಂದು ತಪ್ಪದಿಲ್ಲ.